CC No.16/2024

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.**

| | |
|---|---|
| ಸಿ.ಸಿ. ನಂಬರ್ | : 16/2024 |
| ಸಿ.ಡಬ್ಲ್ಯೂ | : 01 |
| ಪಿ.ಡಬ್ಲ್ಯೂ | : 01 |
| ಸಾಕ್ಷಿಯ ಹೆಸರು | : ಕಲಮೇಶ ಮಹಾದೇವ ಬನ್ನೂರ |
| ವಯಸ್ಸು | : 34 ವರ್ಷ |
| ಉದ್ಯೋಗ | : ಪಿ ಎಸ್ ಐ, ಸವದತ್ತಿ ಪೊಲೀಸ ಠಾಣೆ |
| ವಾಸ ಸ್ಥಳ | : ಸವದತ್ತಿ |

ದಿನಾಂಕಃ 22/02/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ನಾನು ಜೂನ್-2021 ರಿಂದ ಜುಲೈ-2022 ವರೆಗೆ PSI ಎಂದು ನವಲಗುಂದ ಪೊಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 11-11-2021 ರಂದು ನಾನು ಹಾಗೂ ಸಿಬ್ಬಂದಿ ಠಾಣೆಯಲ್ಲಿದ್ದಾಗ ಬೆ.11.00 ಗಂಟೆಗೆ ಆಯಟ್ಟಿ ಗ್ರಾಮದ ಹಳವದವರ ಓಣಿಯ ಸಾರ್ವಜನಿಕ ಸ್ಥಳದಲ್ಲಿ ಆರೋಪಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವಾಗಿ ಬಗ್ಗೆ ಗೊತ್ತಾಗಿದ್ದು ಆಗ ಚಾಸಾ-5 ರವರ ಮುಖಾಂತರ ಚಾಸಾ-2 ಮತ್ತು 3 ರವರನ್ನು ಕರೆಯಿಸಿ ಬೆ.11.30 ಕ್ಕೆ ಠಾಣೆಯಿಂದ ಹೊರಟು ಮ.12.20 ಗಂಟೆಗೆ ಘಟನಾ ಸ್ಥಳ ತಲುಪಿ ವೀಕ್ಷಣೆ ಮಾಡುತ್ತಿದ್ದಾಗ ಆರೋಪಿ ಘಟನಾ ಸ್ಥಳದಲ್ಲಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಸದರಿಯವನು ಮದ್ಯ ಮಾರಾಟ ಮಾಡಲು ತನ್ನ ಬಳಿ ಯಾವುದೇ ಪರವಾನಗೆ ಇಲ್ಲ ಎಂದು ತಿಳಿಸಿರುತ್ತಾನೆ . ಸದರಿಯವರನನ್ನು ವಿಚಾರಿಸಿದಾಗ ಆರೋಪಿ ತನ್ನ

ಹೆಸರನ್ನು ಬಸಪ್ಪ ಶಿವಪ್ಪ ಮೆಣಸಿನಕಾಯಿ ಎಂದು ತಿಳಿಸಿದ್ದು, ಸ್ಥಳದಿಂದ 90 ML ನ 31 ಹೈವರ್ಡ್ಸ್ ವಿಸ್ಕಿ ಪೌಚಗಳು ಹಾಗೂ 1 ಚೀಲವನ್ನು ಜಪ್ತಿಪಡಿಸಿಕೊಂಡು ಎಲ್ಲಾ ಮದ್ಯದ ಪೌಚಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಜಪ್ತಿಪಡಿಸಿಕೊಂಡು ಪಂಚನಾಮೆ ಮ.12.30 ರಿಂದ 01.30 ವರೆಗೆ ನಾನು ಪೂರೈಸಿರುತ್ತೇನೆ.

ನಂತರ ಠಾಣೆಗೆ ತೆರಳಿ ಆರೋಪಿ ವಿರುದ್ದ ಚಾಸಾ-09 ರವರಿಗೆ ದೂರು ಸಲ್ಲಿಸಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ದೂರನ್ನು **ನಿಪಿ-1** ಎಂದು ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-1 ಎ** ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-2** ಎಂದು ಹಾಗೂ ಸಾಕ್ಷಿಯ ಸಹಿಯನ್ನು **ನಿಪಿ-2 ಎ** ಗುರುತಿಸಲಾಯಿತು.

ಸಾಕ್ಷಿಯು ಜಪ್ತಿ ಮಾಡಿದ ಮದ್ಯದ ಪೌಚಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು **ಮು. ಮಾ. 1** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್ ಎನ್ ಡಿ ವಕೀಲರಿಂದ**

ಠಾಣೆಯಿಂದ ಘಟನಾ ಸ್ಥಳ 42 ಕಿ.ಮೀ. ಅಂತರದಲ್ಲಿದೆ. ಸದರಿ ಅಂತರ ತಲುಪಲು 1 ತಾಸು ಅವಧಿ ಬೇಕಾಗುತ್ತದೆ ಎಂದರೆ ಸರಿ. ಚಾಸಾ-2 ಮತ್ತು 3 ರವರನ್ನು ಚಾಸಾ-5 ಕರೆಸಿರುತ್ತಾರೆ. ನಮ್ಮ ವಾಹನವನ್ನು 100 ಮೀಟರ ಅಂತರದಲ್ಲಿ ನಿಲ್ಲಿಸಿರುತ್ತೇವೆ. ವಾಹನವನ್ನು ಯಾವ ಬದಿಗೆ ನಿಲ್ಲಿಸಿ ವಿಕ್ಷಣೆ ಮಾಡಿರುತ್ತೇವೆ ನನಗೆ ನೆನಪಿಲ್ಲ. ಘಟನಾ ಸ್ಥಳದಲ್ಲಿ ಅಂದಾಜು 5-10 ನಿಮಿಷಗಳ ಕಾಲ ವಿಕ್ಷಣೆ ಮಾಡಿರುತ್ತೆವೆ. ಪಂಚನಾಮೆಯನ್ನು ನಮ್ಮ ಸಿಬ್ಬಂದಿ ಬರೆದಿದ್ದು ಅವರ ಸಹಿಯನ್ನು ತೆಗೆದುಕೊಂಡಿರುವದಿಲ್ಲ. ಘಟನಾ ಸ್ಥಳದ ಸುತ್ತಮುತ್ತ ಸಾಕಷ್ಟು ಮನೆಗಳಿರುತ್ತವೆ ಎಂದರೆ ಸರಿ. ಜಪ್ತಿ ಮಾಡಿದ ಎಲ್ಲಾ ಮುದ್ದೆ ಮಾಲನ್ನು ರಸಾಯನಿಕ ಪರೀಕ್ಷೆಗೆ ಕಳುಹಿಸಿರುವದಿಲ್ಲ. ಜಪ್ತಿ ಮಾಡಿದ ಮುದ್ದೆ ಮಾಲಿನ ವಿವರಗಳನ್ನು ಆರೋಪಿತರಿಗೆ ನೀಡಿರುವುದಿಲ್ಲ. ಮುದ್ದೆ ಮಾಲಿನಂತಹ ವಸ್ತುಗಳು ಸಾಮಾನ್ಯವಾಗಿ ಬೇರೆ ಕಡೆಗೆ ಸಿಗುತ್ತವೆ ಎಂದರೆ ಸಿಗಬಹುದು. ಜಪ್ತಿ ಮಾಡಿದ

ನಗದಿನ ಮುಖಬೆಲೆ 100 ಆಗಿರುತ್ತದೆ. ಘಟನಾ ಸ್ಥಳದ ಭಾವಚಿತ್ರಗಳನ್ನು ತೆಗೆದಿಲ್ಲಾ. ಸದರಿ ಭಾವಚಿತ್ರವನ್ನು ತೆಗೆಯಲು ಯಾವದೇ ತೊಂದರೆ ಇರಲಿಲ್ಲಾ. ಯಾವದೇ ರೀತಿ ದಾಳಿ ಮಾಡಿಲ್ಲಾ, ಪಂಚನಾಮೆ ಮಾಡಿಲ್ಲಾ, ಪಂಚರಿಗೆ ಯಾವುದೇ ನೋಟಿಸ ನೀಡಿಲ್ಲ ಹಾಗೂ ಯಾವುದೇ ಒಪ್ಪಿಗೆ ಪತ್ರ ಪಡೆದುಕೊಂಡಿಲ್ಲ ಹಾಗೂ ಮುದ್ದೆ ಮಾಲುಗಳು ಈ ಪ್ರಕರಣಕ್ಕೆ ಸಂಬಂಧಿಸಿಲ್ಲಾ ಎಂದರೆ ಸರಿಯಲ್ಲಾ. ಅಂಕಿ-ಸಂಖ್ಯೆಗೋಸ್ಕರ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**